

ಗಾರ್ಡ್‌ನ್‌ನಲ್ಲಿ ರಾಧಾ ಮತ್ತು ರಂಗಸ್ವಾಮಿ

**(6ನೇ ಪುಟದಿಂದ)**

ಹೈರಾಣಾಗಿರುವ ಸರ್ಕಾರ, ತೀರಾ ಇತ್ತೀಚೆಗೆ ನೂರಾರು ಮರಗಳನ್ನು ಕಡಿದು ಉಕ್ಕಿನ ಸೇತುವೆ ನಿರ್ಮಿಸಲು ಹೊರಟಾಗ ಸಾಮಾಜಿಕ ಜಾಲತಾಣಗಳ ಮೂಲಕ ಜನರೇ ಸೇರಿ ದೊಡ್ಡದೊಂದು ಹೋರಾಟ ನಡೆಸಿ, ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯುವಂತೆ ಮಾಡಿದರು. ಮೆಟ್ರೊ ರೈಲು ಮಾರ್ಗ ನಿರ್ಮಾಣದ ಸಂದರ್ಭದಲ್ಲೂ ಬೆಂಗಳೂರಿನ ನಾಗರಿಕರು ಹೆಜ್ಜೆ ಹೆಜ್ಜೆಗೂ ಮೆಟ್ರೊ ರೈಲು ನಿಗಮದ ಜತೆ ಸೆಣಸಾಟ ನಡೆಸಿ ನೂರಾರು ಮರಗಳನ್ನು ಉಳಿಸಿಕೊಂಡಿದ್ದಾರೆ.

ಬೆಂಗಳೂರಿನ ಹಳೇ ಬಡಾವಣೆಗಳಲ್ಲಿ ಇರುವ ದೊಡ್ಡ ಮನೆಗಳ ಮುಂದಿರುವ ಉದ್ಯಾನಗಳೂ ಈ ವೃಕ್ಷಪ್ರೇಮದ ಸಂಕೇತವೇ. ಜಯನಗರ, ಬಸವನಗುಡಿ, ಮಲ್ಲೇಶ್ವರಂ, ರಾಜಾಜಿನಗರ, ಆರ್.ಟಿ.ನಗರ, ಸದಾಶಿವನಗರ ಮುಂತಾದ ಬಡಾವಣೆಗಳಲ್ಲಿ ಜನರ ವೃಕ್ಷಪ್ರೇಮ ಮತ್ತು ಉದ್ಯಾನಪ್ರೀತಿ ಎದ್ದು ಕಾಣುತ್ತದೆ. ರಸ್ತೆ ಬದಿಯ ಸಣ್ಣದೊಂದು ಜಾಗವೂ ಪಾರ್ಕ್ ಬೇಲಿಯನ್ನು ಹಾಕಿಕೊಂಡಿರುತ್ತದೆ. ಯಲಹಂಕ ಉಪನಗರ ಮುಂತಾದ ಹೊಸ ಬಡಾವಣೆಗಳಲ್ಲೂ ಈ ವೃಕ್ಷಪ್ರೇಮ ಮುಂದುವರಿದಿದೆ.

ಬಸವನಗುಡಿಯಲ್ಲಿ ಹಲವು ದೊಡ್ಡ ಮನೆಗಳಿವೆ. ದೊಡ್ಡ ಮನೆ ಅಂದರೆ 60X50 ಅಥವಾ 60X80 ಮುಂತಾದ ದೊಡ್ಡ ಸೈಟುಗಳಲ್ಲಿ ಕಟ್ಟಲಾದ ಮನೆಗಳು. ಹೆಚ್ಚಿನ ಸೈಟುಗಳು ಎರಡು ತಲೆಮಾರು ಹಿಂದೆಯೇ ಖರೀದಿಸಿದ್ದಾದರೂ, ಇಲ್ಲಿರುವ ಬಂಗಲೆಗಳು ಇತ್ತೀಚಿನ ತಲೆಮಾರಿನಲ್ಲೂ ನಿರ್ಮಾಣವಾದದ್ದಿದೆ. ಆದರೆ ಬಹುತೇಕ ಎಲ್ಲ ಬಂಗಲೆಗಳೂ ಅರ್ಧಕ್ಕರ್ಧ ಅಥವಾ ಅರ್ಧಕ್ಕೂ ಹೆಚ್ಚು ಸ್ಥಳವನ್ನು ಉದ್ಯಾನವನ ಮಾಡಿಕೊಂಡಿವೆ. ಮನೆ ಮುಂದಿನ ಮತ್ತು ಮಗ್ಗುಲಿನ ಈ ಉದ್ಯಾನಗಳು ಇಡೀ ಬೆಂಗಳೂರಿನ ಹಸಿರುಪ್ರೀತಿಗೆ ಸಾಕ್ಷಿಯಾಗಿವೆ. ಬಸವನಗುಡಿಯಲ್ಲಿ ವಾಸವಿರುವ ರಾಧಾ ರಂಗಸ್ವಾಮಿಯವರ ಮನೆಯ ಉದ್ಯಾನವನ್ನೇ ತೆಗೆದುಕೊಳ್ಳಿ. ಬಾಲ್ಯದಲ್ಲಿ ಚನ್ನಪಟ್ಟಣ ಮತ್ತು





ಮೈಸೂರಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಬೆಂಗಳೂರಿನ ಬಸವನಗುಡಿಗೆ ಮದುವೆಯಾಗಿ ಬಂದ ರಾಧಾ ಅವರು, ಪಕ್ಕದಲ್ಲೇ ಇರುವ ಲಾಲ್‌ಬಾಗ್‌ನಲ್ಲಿ ಪ್ರತಿದಿನ ವಾಕಿಂಗ್ ಮಾಡುವವರು. ದಶಕಗಳಿಂದ ಲಾಲ್‌ಬಾಗ್‌ನಲ್ಲಿ ನಡೆಯುವ ಫ್ಲವರ್ ಷೋ ನೋಡುತ್ತಲೇ ಓಡಾಡಿದವರು. ಆ ಪುಷ್ಪಪ್ರದರ್ಶನದಿಂದ ಉತ್ತೇಜಿತರಾಗಿ ತಮ್ಮ ಮನೆಯ ಅಂಗಳದಲ್ಲೂ ಏಕೆ ಪುಟ್ಟದೊಂದು ಉದ್ಯಾನ ಮಾಡಬಾರದು ಎನ್ನುವ ಆಸೆ ಹುಟ್ಟಿತು.

ಅದರ ಮೂರ್ತರೂಪವಾಗಿ 1982ರಲ್ಲಿ ಜೀವ ತಳೆದದ್ದು ಮನೆಯ ಸುತ್ತ ಉದ್ಯಾನ. ಕಳೆದ 37 ವರ್ಷಗಳಲ್ಲಿ ರಾಧಾ ಮತ್ತು ರಂಗಸ್ವಾಮಿಯವರು